**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸ್ಪೆಷಲ್ ಕೇಸ್ ನಂಃ 70/2019 ಪಿ.ಡಬ್ಲ್ಯುಃ 3**
**ಸಿ.ಡಬ್ಲ್ಯುಃ 8**

| | |
|---|---|
| ಸಾಕ್ಷಿದಾರರ ಹೆಸರು | ಸಂತೋಷ್ |
| ತಂದೆಯ ಹೆಸರು | ಬಾಲಚಂದ್ರ |
| ವಯಸ್ಸು | 54 ವರ್ಷ |
| ಉದ್ಯೋಗ | ಕ್ಯಾಟರಿಂಗ್ |
| ವಿಳಾಸ | ಹಿರಿಯಡ್ಕ |

ದಿನಾಂಕಃ 21-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಆತ ನಮ್ಮೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ನಾನು 2018 ರ ಸಾಲ್ಲಿನಲ್ಲಿ ಶಾಲಾ ಅಭಿವೃದ್ದಿ ಸಮಿತಿಯ ಅಧ್ಯಕ್ಷನಾಗಿದ್ದೆ.

2) ಎಸಿಬಿ ಪೊಲೀಸರು ನನ್ನನ್ನು ಶಾಲಾ ವಿದ್ಯಾರ್ಥಿಗಳಿಂದ ಸಂಗ್ರಹವಾದ 1,68,150.00 ರೂಪಾಯಿಗಳನ್ನು ಶಾಲೆಯ ಎಸ್ ಡಿ ಎಂ ಸಿ ಅಕೌಂಟ್ ಗೆ ಹಾಕಿಬೇಕಾಗಿತ್ತು. ಆ ಹಣಕ್ಕಾಗಿ ಬಿ.ಓ ಅವರಿಗೆ ದೂರಿದ್ದೆವು.

3) ದಿನಾಂಕ 17-03-2018 ರಂದು ಹಿರಿಯಡ್ಕ ಶಾಲೆಯಲ್ಲಿ ಎಸಿಬಿ ರೇಡ್ ಆಗಿತ್ತು ಎಂದು ತಿಳಿದಿತ್ತು. ಆದಿನ ಆರೋಪಿ, ಶಾಲೆಗೆ ಶೂ ಸಪ್ಲ್ಯ ಮಾಡಿದವರ ಬಳಿ ರೂ 7 ಸಾವಿರ ಹಣ ಕೇಳಿದ್ದರು ಎಂದು ಎಸಿಬಿ ಪೊಲೀಸರು ಹೇಳಿದ್ದರಿಂದ ತಿಳಿದಿತ್ತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ.ವಿ.ಹೆಚ್. ವಕೀಲರಿಂದ**

1) ನಾನು ಶಾಲೆಯ ಎಸ್ ಡಿ ಎಂ.ಸಿ ಯಲ್ಲಿ 2016 ರಿಂದ ಸೇವೆ ಸಲ್ಲಿಸುತ್ತಿದ್ದೆ. ನಮ್ಮ ಶಾಲೆಯಲ್ಲಿ 1 ರಿಂದ 8 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಪಾಠ

ನಡೆಯುತ್ತಿದೆ. ನಮ್ಮ ಶಾಲೆಯಲ್ಲಿ 6 ರಿಂದ 8 ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿಯೂ ಪಾಠ ನಡೆಯುತ್ತಿದೆ. ಇಂಗ್ಲೀಷ್ ಮಾಧ್ಯಮದ ಪಾಠಕ್ಕಾಗಿ ಅರೆಕಾಲಿಕ ಸಿಬ್ಬಂದಿಗಳನ್ನು ನೇಮಿಸಿಕೊಂಡಿದ್ದೆವು ಎಂದರೆ ನಿಜ. ಅವರ ನೇಮಕಾತಿಯನ್ನು ಶಾಲೆಯ ಎಸ್ ಡಿ ಎಂ ಸಿ ಇವರ ನಿರ್ಣಯದಂತೆ ನೇಮಿಸಿತ್ತು ಎಂದರೆ ನಿಜ. ಅರೆಕಾಲಿಕ ಸಿಬ್ಬಂದಿಗಳ ಸಂಬಳ ಸರಕಾರದಿಂದ ಬರುತ್ತಿರಲಿಲ್ಲ ಎಂದರೆ ನಿಜ. ಸದರಿ ಸಿಬ್ಬಂದಿಗಳ ಸಂಬಳಕ್ಕಾಗಿ ಪೋಷಕರಿಂದಲೂ ಹಣ ಸಂಗ್ರಹಿಸುತ್ತಿದ್ದೆವು ಎಂದರೆ ನಿಜ.

2) ಶಾಲೆಗೆ ಬೇಕಾದ ಸಾಮಾಗ್ರಿಗಳನ್ನು ಯಾರಿಂದ ಸರಬರಾಜು ಮಾಡಿಸಿಕೊಳ್ಳಬೇಕೆಂದು ಎಸ್.ಡಿ.ಎಂ .ಸಿ ನಿರ್ಧರಿಸುತ್ತದೆ ಎಂದರೆ ನಿಜ. ಸರಕಾರದಿಂದ ಬರುವ ಸಾಮಾಗ್ರಿಗಳನ್ನು ಸಹ ನಾವು ಪಡೆಯುತ್ತೇವೆ. ಶಾಲೆಗೆ ಬರುವ ಯಾವುದೇ ರೀತಿಯ ಸಹಾಯವನ್ನು ನಾವು ಪಡೆಯುತ್ತೇವೆ. ಅದಕ್ಕಾಗಿ ರಶೀತಿಯನ್ನು ಸಹ ನಾವು ಕೊಡುತ್ತೇವೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಮಕ್ಕಳ ಶೂಗಳಿಗಾಗಿ ಪಾಲಕರಿಂದ ರೂಃ 1,68,000 ನಾವು ಸಂಗ್ರಹಿಸಿಲ್ಲ ಎಂದು ನಾವು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಚಾಸಾ -1 ಎಸಿಬಿ ಪೊಲೀಸರಿಗೆ ಏನು ದೂರು ಕೊಟ್ಟಿದ್ದರು ಎಂದು ನನಗೆ ಮಾಹಿತಿ ಇಲ್ಲ. ಚಾಸಾ -1 ಯಾವ ಸಾಲಿನಲ್ಲಿ ಶೂಗಳನ್ನು ಸರಬರಾಜು ಮಾಡಿದ್ದರು ಎಂದು ಈಗ ನೆನಪಿಲ್ಲ. ಪೊಲೀಸರು ನನಗೆ ವಿಚಾರ ಮಾಡಿದ ಸುಮಾರು 8 ತಿಂಗಳ ಮೊದಲೇ ಶೂಗಳಿಗೆ ಸಲ್ಲಬೇಕಾದ ಹಣ ಪಾವತಿ ಆಗಿದೆ ಎಂದರೆ, ಸಾಕ್ಷಿ ಸುಮ್ಮನಿದ್ದಾರೆ.

3) ಚಾಸಾ -1 ಇವರು ಒಪ್ಪಿದಂತೆ ಉತ್ತಮ ಗುಣಮಟ್ಟದ ಮತ್ತು ಬ್ರಾಂಡ್ ಶೂಗಳನ್ನು ಸರಬರಾಜು ಮಾಡದೇ ಕಳಪೆ ಗುಣಮಟ್ಟದ ಶೂಗಳನ್ನು ಸರಬರಾಜು ಮಾಡಿದ್ದರು ಮತ್ತು ಆ ವಿಷಯವನ್ನು ಆರೋಪಿ ನಮ್ಮ ಗಮನಕ್ಕೆ ತಂದಿದ್ದರು ಎಂದರೆ, ಸಾಕ್ಷಿ ಸುಮ್ಮನಿದ್ದರು. ಆದ್ದರಿಂದ ಪಿರ್ಯಾಧಿದಾರ ಆರೋಪಿಯ ಮೇಲೆ ಶಾಲಾ ಅಭಿ ವೃದ್ಧಿ ಸಮಿತಿಯ ಹೆಸರಿನೊಂದಿಗೆ ಸೇರಿ ಸುಳ್ಳು ಆರೋಪ ಮಾಡಿದ್ದಾರೆ ಎಂದರೆ ಸಾಕ್ಷಿ

ಸುಮ್ಮನಿದ್ದಾರೆ. ನಾನು ಎಸಿಬಿ ಪೊಲೀಸರ ಪ್ರಭಾವಕ್ಕೆ ಮಣಿದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ